ಎಕ್ಸ್‌ಪೋಶರ್ ಲಿಮಿಟ್ (Exposure Limit) ಈಗಾಗಲೇ ಮುಗಿದಿರುವುದಾಗಿ ನಬಾರ್ಡು ಅಭಿಪ್ರಾಯ ವ್ಯಕ್ತಪಡಿಸಿರುತ್ತದೆ.

ಸಂಖ್ಯೆ:ಸಿಓ 42 ಸಿಎಲ್‌ಎಸ್ 2009

ಸಹಿ/-
(ಲಕ್ಷ್ಮಣ ಸ. ಸವದಿ)
ಸಹಕಾರ ಸಚಿವರು

ಕರ್ನಾಟಕ ವಿಧಾನ ಸಭೆ

416 ಶ್ರೀ ನಾಡಗೌಡ ವೆಂಕಟರಾವ್

ಅ) ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿಯಮಿತದಿಂದ ಯಾವ ಯಾವ ಸಹಕಾರಿ ಮತ್ತು ಸಹಕಾರೇತರ ಸಕ್ಕರೆ ಕಾರ್ಖಾನೆಗಳಿಗೆ ಸಾಲ ಕೊಡಲಾಗಿದೆ ಹಾಗೂ ಬ್ಯಾಂಕಿನ ಪದಾಧಿಕಾರಿಗಳ ಸಂಬಂಧಿಕರು ಆಡಳಿತ ಮಂಡಳಿಯಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ಸಾಲ ಕೊಡಲಾಗಿದೆಯೇ; ಹಾಗಿದ್ದಲ್ಲಿ ಸಾಲ ಮಂಜೂರಾತಿ ನಿಯಮಗಳನ್ನು ಪಾಲಿಸಲಾಗಿದೆಯೇ?

ಕಳೆದ ಮೂರು ವರ್ಷದ ಅವಧಿಯಲ್ಲಿ ಈ ಬ್ಯಾಂಕ್ ಸಹಕಾರಿ ಹಾಗೂ ಸಹಕಾರೇತರ ಸಕ್ಕರೆ ಕಾರ್ಖಾನೆಗಳಿಗೆ ಸಾಲ ಕೊಡಲಾಗಿದೆ.

ಸಹಕಾರಿ ಸಕ್ಕರೆ ಕಾರ್ಖಾನೆಗಳು:

1) ಎನ್.ಎಸ್.ಎಸ್.ಕೆ. ಇಮ್ಮಾಮಪುರ
2) ಬಿ.ಎಸ್.ಎಸ್.ಕೆ.ಹಳ್ಳಿಖೇಡ
3) ಎಂ.ಜಿ.ಎಸ್.ಎಸ್.ಕೆ ಭಾಲ್ಕಿ

ಸಹಕಾರೇತರ ಕಾರ್ಖಾನೆಗಳು:

1) ವಿಶಾಲ ಖಂಡಸಾರಿ ಮನ್ನಳ್ಳಿ
2) ವಿಷ್ಣು ಖಂಡಸಾರಿ ಬೀದರ್

ಈ ಕಾರ್ಖಾನೆಗಳ ಆಡಳಿತ ಮಂಡಳಿಗಳಲ್ಲಿ ಬ್ಯಾಂಕಿನ ಪದಾಧಿಕಾರಿಗಳ ಸಂಬಂಧಿಕರು ಇರುವುದಿಲ್ಲ.

ಆ) ಮೇಲ್ಕಂಡ ಸಹಕಾರ ಮತ್ತು ಸಹಕಾರೇತರ ಸಕ್ಕರೆ ಕಾರ್ಖಾನೆಗಳು ಪಡೆದ ಸಾಲಗಳು ಸಮರ್ಪಕವಾಗಿ ಉಪಯೋಗವಾಗಿ ಬೀದರ್ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿಗೆ ಮರುಪಾವತಿಯಾಗಿದೆಯೇ?

ಸಾಲಗಳು ಸಮರ್ಪಕವಾಗಿ ಉಪಯೋಗವಾಗಿ ಬೀದರ್ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿಗೆ ಮರುಪಾವತಿಸಲ್ಪಟ್ಟಿವೆ.

ಇ) ಮರುಪಾವತಿ ಆಗದೇ ಬೀದರ್ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿಗೆ ಸುಸ್ತಿಯಾಗಿದೆಯೇ? ಹಾಗಿದ್ದಲ್ಲಿ, ವಿವರ ನೀಡುವುದು.

ಯಾವುದೇ ಕಾರ್ಖಾನೆಯ ಸಾಲವು ಸುಸ್ತಿ ಆಗಿರುವುದಿಲ್ಲ.

ಈ) ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿಯಮಿತ, ಇದರ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸಹಕಾರ ಕಾಯ್ದೆ ಕಲಂ 64ರ ವಿಚಾರಣೆ ಅಥವಾ ಕಲಂ 65ರ ತನಿಖೆ ಇಲ್ಲವೆ ಯಾವುದಾದರೂ ಇಲಾಖಾ ತನಿಖೆ / ವಿಚಾರಣೆ ಮಾಡಲಾಗಿದೆಯೇ? ಹಾಗಿದ್ದಲ್ಲಿ, ವಿವರ ನಿಡುವುದು.

ಸಹಕಾರ ಸಂಘಗಳ ಜಂಟಿ ನಿಬಂಧಕರು, ಪ್ರಾಂತ, ರಾಯಚುರು ಇವರು ದಿನಾಂಕ: 06.12.2008 ರ ಬೀದರ್ ಜಿಲ್ಲಾ ಸಹಕಾರಿ ಬ್ಯಾಂಕಿನಲ್ಲಿ ನಡೆದಿದೆ ಎನ್ನ ದುರುಪಯೋಗ/ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 64ರಡಿ ಶಾಸನಬದ್ದ ವಿಚಾರಣೆಗೆ ಆದೇಶಿಸಿ ಸಹಕಾರ ಸಂಘಗಳ ಉಪ ನಿಬಂಧಕರು, ಗುಲ್ಬರ್ಗಾ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿದ್ದು ಸದರಿ ವಿಚಾರಣಾಧಿಕಾರಿಯು ದಿನಾಂಕ: 29.03.2008 ಮತ್ತು 24.04.2008 ರಂದು ವಿಚಾರಣಾ ವರದಿಯನ್ನು ಸಲ್ಲಿಸಿದ್ದಾರೆ. ದಿನಾಂಕ: 10.06.2008ರಂದು ಪ್ರಕರಣ 68ರ ಅಡಿಯಲ್ಲಿ ವಿಚಾರಣಾ ವರದಿಯಲ್ಲಿ ತಿಳಿಸಲಾಗಿರುವ ನ್ಯೂನತೆಗಳನ್ನು ಸರಿಪಡಿಸಲು ಆದೇಶ ನೀಡಲಾಗಿರುತ್ತದೆ. ಸದರಿ ವಿಚಾರಣಾ ವರದಿಯನ್ನು ಪರಿಶೀಲಿಸಿದಾಗ, ಸದರಿ ಬ್ಯಾಮಕಿನಲ್ಲಿ ಯಾವುದೇ ಹಣ ದುರುಪಯೋಗವಾಗದೇ ಬ್ಯಾಂಕು ಕೃಷಿಯೇತರ (NFS) ಹಾಗೂ ಕೃಷಿ ಸಾಲ ನೀಡುವಾಗ ನಬಾರ್ಡಿನ Exposure norms ಗಳನ್ನು ಉಲ್ಲಂಘಿಸಿ ಸಾಲ ನೀಡಿರುವುದು ಕಂಡುಬರುತ್ತದೆ. ಜೊತೆಗೆ ನೇಮಕಾತಿ ನಿಯಮಗಳ ಉಲ್ಲಂಘನೆಯಾಗಿರುವುದು, ಕಂಪ್ಯೂಟರ್ ಖರೀದಿಯಲ್ಲಿ ಸಹಕಾರ ಸಂಘಗಳ ನಿಬಂಧಕರ ಅನುಮತಿ ಪಡೆಯದಿರುವುದು ಹಾಗೂ ನಬಾರ್ಡ್/ ಸಹಕಾರ ಸಂಘಗಳ ನಿಬಂಧಕರ ಸುತ್ತೋಲೆಯ ನಿರ್ದೇಶನಗಳನ್ನು ಮೀರಿ ದೇಣಿಗೆ ನೀಡಿರುವುದು ಕಂಡುಬರುತ್ತದೆ. ಪ್ರಕರಣ 58ರ ಆದೇಶಕ್ಕೆ ಬೀದರ್ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು ದಿನಾಂಕ: 20.08.2008 ರಂದು ಅನುಪಾಲನಾ ವರದಿಯನ್ನು ಸಲ್ಲಿಸಿರುತ್ತಾರೆ.

ಉ) ಕಳೆದ ಮೂರು ವರ್ಷಗಳಿಂದ ಬೀದರ್ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಲಾಭದಲ್ಲಿದೆಯೇ ಅಥವಾ ನಷ್ಟದಲ್ಲಿದೆಯೇ?

ಕಳೆದ ಮೂರು ವರ್ಷಗಳಿಂದ ಬೀದರ್ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು ಲಾಭದಲ್ಲಿದೆ.

ಊ) ಹಾಗಿದ್ದಲ್ಲಿ ಅದಕ್ಕೆ ಜವಾಬ್ದಾರರ್ಯಾರು ಅವರು ಮೇಲೆ ತೆಗೆದುಕೊಂಡಿರುವ ಕ್ರಮಗಳೇನು ವಿವರ (ನೀಡುವುದು)?

ಅನ್ವಯಿಸುವುದಿಲ್ಲ.

ಸಂಖ್ಯೆ: 55 ಸಿಆರ್‌ಸಿ 2009

ಸಹಿ/-

(ಲಕ್ಷ್ಮಣ ಸ. ಸವದಿ)
ಸಹಕಾರ ಸಚಿವರು.

(ಆರ್.ಎಸ್.ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

418 ಶ್ರೀ ಹೆಚ್.ಕೆ.ಕುಮಾರಸ್ವಾಮಿ (ಸಕಲೇಶಪುರ)

ಅ) ರಾಜ್ಯದಲ್ಲಿ ತಾಲ್ಲೂಕು ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳೆಷ್ಟು ಹಾಗೂ ಇವುಗಳ ಹೆಸರು ಮತ್ತು ವಿಳಾಸ ನೀಡುವುದು.

ರಾಜ್ಯದಲ್ಲಿ ತಾಲ್ಲೂಕು ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳು ದಿನಾಂಕ 31.03.2008ಕ್ಕೆ ಇದ್ದಂತೆ 2028 ಇರುತ್ತವೆ.

ಆ) ಇವುಗಳಲ್ಲಿ ನಿಷ್ಕ್ರಿಯ ಸಹಕಾರಿ ಸಂಘಗಳೆಷ್ಟು ಹಾಗೂ ಕ್ರಿಯಾಶೀಲ ಸಹಕಾರ ಸಂಘಗಳೆಷ್ಟು; ಈ ಸಂಘಗಳು ನಿಷ್ಕ್ರಿಯಗೊಳ್ಳಲು ಕಾರಣಗಳೇನು?

ಇವುಗಳಲ್ಲಿ ನಿಷ್ಕ್ರಿಯ ಸಹಕಾರ ಸಂಘಗಳು 237 ಇದ್ದು, ಕ್ರಿಯಾಶೀಲ ಸಹಕಾರ ಸಂಘಗಳು 1480 ಇರುತ್ತವೆ.

ಸಂಘಗಳು ನಿಷ್ಕ್ರಿಯಗೊಳ್ಳಲು ಹಲವಾರು ಕಾರಣಗಳಿದ್ದು, ಅವುಗಳಲ್ಲಿ ಮುಖ್ಯವಾದವುಗಳು;

1. ಬೆಳೆಗೆ ಉತ್ತಮ ಬೆಲೆ ದೊರೆಯದ ಕಾರಣ ಸಾಲ ವಸೂಲಾತಿ ಕುಂಠಿತವಾಗಿರುತ್ತದೆ.
2. ಸಂಘಗಳಲ್ಲಿ ಕಾಲಕಾಲಕ್ಕೆ ನಡೆದಿರುವ ಹಣದುರುಪಯೋಗ ಪ್ರಕರಣಗಳು ಹೆಚ್ಚುತ್ತಿರುವುದರಿಂದ
3. ಸಂಘಗಳ ವ್ಯವಹಾರದ ನಿರ್ವಹಣೆ ಸರಿಯಿಲ್ಲದ ಕಾರಣ

ಇ) ಕಳೆದ ಮೂರು ವರ್ಷಗಳಿಂದ ವರ್ಷವಾರು ಆಡಿಟ್ ಮಾಡಲಾಗಿರುವ ತಾಲ್ಲೂಕುಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳೆಷ್ಟು? (ವಿವರ ನೀಡುವುದು) ಇದೇ ಅವಧಿಯಲ್ಲಿ ತಾಲ್ಲೂಕು ಮಟ್ಟದ ಕಾರ್ಯ ವ್ಯಾಪ್ತಿಯಲ್ಲಿ, ಪುನರ್ ಆಡಿಟ್ ಮಾಡಲಾಗಿರುವ ಸಂಘಗಳೆಷ್ಟು? (ವಿವರ ನೀಡುವುದು)

ಕಳೆದ 3 ವರ್ಷಗಳಿಂದ ವರ್ಷವಾರು ಆಡಿಟ್ ಮಾಡಲಾಗಿರುವ ತಾಲ್ಲುಕು ಮಟ್ಟದ ಕಾರ್ಯಾವ್ಯಾಪ್ತಿಯ ಸಹಕಾರ ಸಂಘಗಳ ವಿವರ ಕೆಳಕಂಡಂತಿರುತ್ತದೆ.

1-4-2005 ರಿಂದ 31-3-2006

	ಸಂಘಗಳ ಕಾರ್ಯಸ್ಥಿತಿ	